ಅಸಲು ದಾವಾ ಸಂಖ್ಯೆ . 276- 2014

ಪಿ.ಡಬ್ಲ್ಯೂ-2

ದಿಃ 12-02-2020

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 2 ನೇ ಪ್ರತಿವಾದಿ ಪರ ಶ್ರೀ ಡಿ ಆರ್ ಎಸ್ ವಕೀಲರಿಂದಃ-

ದಾವಾ ಆಸ್ತಿಯು ಕಾಳಮ್ಮ ರವರಿಗೆ ಅವರ ತಂದೆ ವೀರಬಸಪ್ಪ ರವರಿಂದ ಬಂದಿರುತ್ತದೆ . ವೀರಬಸಪ್ಪ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ . ವೀರಬಸಪ್ಪ ರವರು ಕಾಳಮ್ಮ ರವರಿಗೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ . ಕಾಳಮ್ಮ ದಿ ಃ 22-05-1977 ರಂದು ವೀರಬಸಪ್ಪರವರಿಂದ ಬಂದ ಆಸ್ತಿಯನ್ನು ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತು . ಕಾಳಮ್ಮ ರವರು ಸದರಿ ಆಸ್ತಿಯನ್ನು ಹೆಚ್ ಬಿ ರಂಗಪ್ಪ ಬಿನ್ ಮಹಾದೇವಪ್ಪ ರವರಿಗೆ ಪೂರ್ವ ಪಶ್ಚಿಮ 27 ಗಜ ಉತ್ತರ ದಕ್ಷಿಣ 20 ಗಜ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ . ಕಾಳಮ್ಮ ದಿಃ 22-05-1977 ರಲ್ಲಿ ಮಾರಾಟ ಮಾಡಿರುವ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ ಪರಿಬೇಲಿ, ಪಶ್ಚಿಮಕ್ಕೆ ಪಿ ಡಬ್ಲ್ಯೂಡಿ ರಸ್ತೆ , ಉತ್ತರಕ್ಕೆ ಗೋವಿಂದಪ್ಪ ರವರ ಜಾಗ , ದಕ್ಷಿಣಕ್ಕೆ ಬಡಿಗಿ ಪರಮೇಶ್ವರಪ್ಪ ರವರ ಜಾಗ . ಎಷ್ಟು ಹಣಕ್ಕೆ ಮಾರಾಟ ಮಾಡಲಾಗಿತು ಎಂದು ನನಗೆ ಗೊತ್ತಿಲ್ಲ . ಹೆಚ್ ಬಿ ರಂಗಪ್ಪ ರವರು ಖರೀದಿ ಮಾಡಿದಾಗಿನಿಂದ 27X 20 ವಿಸ್ತೀರ್ಣದ ಸ್ವತ್ತಿನ ಸಂಪೂರ್ಣ ಮಾಲೀಕರು ಮತ್ತು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ . ಸದರಿ ಹೆಚ್ ಬಿ ರಂಗಪ್ಪ ಬಿನ್ ಮಹಾದೇವಪ್ಪ ರವರು ಈಗ ಜೀವಂತವಿದ್ದಾರೆ ಎಂದರೆಸ ರಿ . ಅವರ ಮಕ್ಕಳು ಸಹ ಇದ್ದಾರೆ . ದಿ ಃ 25-06-1992 ರಂದು ಕಾಳಮ್ಮ ರವರು ಹೆಚ್ ಬಿ ರಂಗಪ್ಪ ಬಿನ್ ಮಹಾದೇವಪ್ಪರಿಂದ ಪೂರ್ವ ಪಶ್ಚಿಮ 78 ಅಡಿ ಮತ್ತು ಉತ್ತರ ದಕ್ಷಿಣ 35 ಅಡಿ ಮಾತ್ರ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಕಾಳಮ್ಮ ರವರು ಈಗ ವಾಸವಿರುವ ಚೆಕ್ಕು ಬಂಧಿ ನನಗೆ ಗೊತ್ತು . ಖರೀದಿ ಮಾಡಿದ ಆಸ್ತಿಯಚೆಕ್ಕು ಬಂದಿ ನನಗೆ ಗೊತ್ತಿಲ್ಲ . ಕಾಳಮ್ಮ ರವರು ಹೆಚ್ ಬಿ ರಂಗಪ್ಪ ರವರಿಂದ ಖರೀದಿ ಮಾಡಿದ ನಂತರದಲ್ಲಿ 75X35 ಅಡಿವುಳ್ಳ ಸ್ವತ್ತನ್ನು ಪ್ರಕಾಶ ಬಿನ್ ಮಹಾದೇವಪ್ಪ ರವರಿಗೆ ಪುನಃ ಮಾರಾಟ ಮಾಡಿರುತ್ತಾರೆ ಎಂದರೆ ಸರಿ . ಪ್ರಕಾಶ್ ಬಿನ್ ಮಹಾದೇವಪ್ಪ ರವರು ಇವತ್ತಿಗೂ ಸದರಿ ಅಸ್ತಿಯ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ . ದಿ ಃ 12-09-2011 ರಂದು ಪುನಃ ಕಾಳಮ್ಮ ರವರು ಪ್ರಕಾಶ್ ಬಿನ್ ಮಹಾದೇವಪ್ಪ ರವರಿಂದ 78 35 ಅಡಿ ಪೈಕಿ 78X7½ ವಿಸ್ತೀರ್ಣದ ಸ್ವತ್ತನ್ನು ಖರೀದಿ ಮಾಡಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸ ರಿ .

ಕಾಲಾವಕಾಶ ಕೋರಿದ್ದು , ನೀಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.